411(112) ಶ್ರೀ ಆಶೋಕ್ ಆರ್ (ಉತ್ತರಹಳ್ಳಿ) ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರೇಷ್ಮೆ ಸಂಶೋಧನಾ ಅಭಿವೃದ್ಧಿ ಸಂಸ್ಥೆಯ ನೌಕರರುಗಳಿಗೆ ಕಳೆದ 5–6 ವರ್ಷಗಳಿಂದ ಸರಿಯಾಗಿ ವೇತನವನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ರೇಷ್ಮೆ ಸಂಶೋಧನಾ ಇಲಾಖೆಯು ತೀವ್ರವಾಗಿ ಆರ್ಥಿಕ ಸಂಕಷ್ಟವನ್ನೆದುರಿಸುತ್ತಿದ್ದು ಸಂಬಳ ಪಾವತಿಸಲು ಮತ್ತು ಅಭಿವೃದ್ಧಿ ಸಂಶೋಧನೆಗೆ ಹಣಕಾಸಿನ ಲಭ್ಯತೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಈ ನಿಟ್ಟಿನಲ್ಲಿ ಸರ್ಕಾರದ ಯೋಜನೇತರ ಇಲಾಖೆಯ ಬೆಲೆ ಸ್ಥಿರೀಕರಣ ನಿಧಿ ಹಾಗೂ ಕೇಂದ್ರದ ಯೋಜನಾ ಅನುದಾನಕ್ಕಾಗಿ ಯಾವ ಅನುಕೂಲವನ್ನು ಕಲ್ಪಿಸಲಾಗಿದೆ ,

ಈ) ಸಂಸ್ಥೆಯ ನೌಕರರಿಗೆ ನಿಯಮಿತವಾದ ವೇತನದೊಂದಿಗೆ ಸೇವಾ ಸೌಲಭ್ಯ, ವಿಜ್ಞಾನಿ ನೌಕರರಿಗೆ ಇತರ ಸಂಸ್ಥೆಗಳಿಗೆ ಹೋಲಿಕೆಯಾಗುವ ವೇತನ ಶ್ರೇಣಿ, ಪಿಂಚಣಿ ಸೌಲಭ್ಯಗಳು ಸರ್ಕಾರದ ಮಟ್ಟಲದಲಿ ಇನ್ನು ಇತ್ಯರ್ಧವಾಗದೇ ಇರಲು ಕಾರಣವೇನು ?

ಶ್ರೀ ಚೆನ್ನಿಗಪ್ಪ (ರೇಷ್ಮೆ ಸಚಿವರು)

ಅ) ಈ ಸಂಸ್ಥೆಯಲ್ಲಿ ಕಳೆದ 5–6 ವರ್ಷಗಳಿಂದ ಆರ್ಥಿಕ ಸಂಕಷ್ಟವಿದ್ದರೂ ಸಹ ಡಿಸೆಂಬರ್ 2004ರ ಮಾಹೆಯವರೆಗೆ ಬಾಕಿ ಇಲ್ಲದಂತೆ ವೇತನ ಪಾವತಿಸಲಾಗಿದೆ ಈ ಬಗ್ಗೆ ಸರ್ಕಾರವು ಸೂಕ್ತ ಕ್ರಮ ಕೈಗೊಂಡಿದೆ

ಆ) ಬಂದಿದೆ

ಇ) ಬೆಲೆ ಸ್ಥಿರೀಕರಣ ನಿಧಿಯಿಂದ 2000 ರಿಂದ ಇತ್ತೀಚಿನವರೆಗೂ 7 ಕಾರ್ಯಕ್ರಮಗಳಿಗಾಗಿ ಅನುದಾನ ಬಿಡುಗಡೆಯಾಗಿರುವ ಒಟ್ಟು ಮೊತ್ತ ರೂ 22 32 ಲಕ್ಷಗಳಾಗಿರುತ್ತದೆ ಹೆಚ್ಚಿನ ಹಣಕಾಸಿನ ಬಿಡುಗಡೆಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ

ಈ) ಸರ್ಕಾರದ ಆದೇಶಗಳನ್ನು ಆಗಿಂದ್ದಾಗೆ ಯಥಾವತ್ತಾಗಿ ಜಾರಿಗೊಳಿಸಿ ವೇತನ ಮತ್ತು ಸೇವಾ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ ಪಿಂಚಣಿ ಸೌಲಭ್ಯಕ್ಕೆ ಸಂಬಂಧಿಸಿದಂತೆ ಎಲ್ ಐ ಸಿ ಯಿಂದ ಸಂಸ್ಥೆಯ ನೌಕರರಿಗೆ ಸೌಲಭ್ಯವನ್ನು ವಿಸ್ತರಿಸಲು ಕ್ರಮ ವಹಿಸುವಂತೆ ಸೂಚಿಸಿದೆ

412(227) ಶ್ರೀ ಆರ್ ಆಶೋಕ್ ಮತ್ತು ಶ್ರೀ ಪಿ ಸಿ ಮೋಹನ್(ಉತ್ತರಹಳ್ಳಿ) ಮಾನ್ಯ ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಹೊರವಲಯದಲ್ಲಿ ರಫ್ತು ಉತ್ತೇಜನಾ ಕೈಗಾರಿಕಾ ಪಾರ್ಕ್ ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆಯೇ ,

ಆ) ಈ ಉದ್ದೇಶಕ್ಕೆ ವಶಪಡಿಸಿಕೊಳ್ಳಲಾಗಿರುವ ಜಮೀನು ಎಷ್ಟು ,

ಇ) ವಶಪಡಿಸಿಕೊಳ್ಳಲಾಗಿರುವ ಜಮೀನಿನ ಒಟ್ಟು ಮೌಲ್ಯ ಎಷ್ಟು

ಈ) ಜಮೀನನ್ನು ವಶಪಡಿಸಿಕೊಂಡ ನಂತರ ಜಮೀನಿಗೆ ಪರಿಹಾರ ನೀಡಲಾಗಿದೆಯೇ ,

ಉ) ನಿರಾಶ್ರಿತರುಗಳನ್ನು ಗಾಳಿಗೆ ತೂರಿ [illegible]